# ವಾಣಿಜ್ಯ ನೀತಿಗಳ ಪರಿಷ್ಕರಣೆ ಅಗತ್ಯ

ಬೆಂಗಳೂರು: ಹವಾಮಾನ ಬದಲಾವಣೆ, ರಾಷ್ಟ್ರೀಯ ಭದ್ರತೆ ಮತ್ತು ಮಾನವ ಹಕ್ಕುಗಳಂತಹ ಸಮಸ್ಯೆಗಳು ಭವಿಷ್ಯದ ಅಂತಾರಾಷ್ಟ್ರೀಯ ವಹಿವಾಟಿನ ಮೇಲೆ ಪರಿಣಾಮ ಬೀರಲಿದ್ದು, 21 ನೇ ಶತಮಾನಕ್ಕೆ ಕಾಲಿಡುತ್ತಿರುವ ಈ ಹೊತ್ತಿನಲ್ಲಿ ಇಂಥ ಸಮಸ್ಯೆಗಳನ್ನು ಪರಿಷ್ಕರಿಸುವ ಅಗತ್ಯವಿದೆ ಎಂದು ಕನಾಸ್ ವಿವಿಯ ಅಧ್ಯಾಪಕ ಪ್ರೊ. ರಾಜ್ ಭಾಲಾ ಅಭಿಪ್ರಾಯಪಟ್ಟರು.

ಸಿಎಂಆರ್ ವಿಶ್ವವಿದ್ಯಾಲಯದ ಕಾನೂನು ವ್ಯಾಸಂಗ ವಿಭಾಗದಿಂದ ಏರ್ಪಡಿಸಲಾಗಿದ್ದ ಇಂಡೋ ಫೆಸಿಫಿಕ್ ಪ್ರದೇಶದಲ್ಲಿ ಅಂತಾರಾಷ್ಟ್ರೀಯ ವಾಣಿಜ್ಯ ಕಾನೂನಿನ ಸವಾಲುಗಳು ಎಂಬ ವಿಚಾರ ಸಂಕಿರಣದಲ್ಲಿ ಮಾತನಾಡಿದ ಅವರು, ಇಂಡೋ ಫೆಸಿಫಿಕ್ ವ್ಯಾಪ್ತಿಯಲ್ಲಿ ವಹಿವಾಟು ನಡೆಸುತ್ತಿರುವ ಅಮೆರಿಕ, ಭಾರತ, ಜಪಾನ್, ಚೀನಾ ಮುಂತಾದ ಪ್ರಮುಖ ದೇಶಗಳ ವಾಣಿಜ್ಯ ಸ್ಥಿತಿಗತಿಗಳ ಕುರಿತು ಮಾತನಾಡುತ್ತಾ, ವಾಣಿಜ್ಯ ಒಪ್ಪಂದಗಳಲ್ಲಿ ಹೊಸ ನೀತಿಯ ಅವಶ್ಯಕತೆಯಿದ್ದು, ಜೊತೆಗೆ ಮಹಿಳೆಯರು, ತಾರತಮ್ಯಕ್ಕೊಳಗಾದವರು ಮತ್ತು ಅಲ್ಪಸಂಖ್ಯಾತರಿಗೆ ಸಮಾನಾವಕಾಶ ಕಲ್ಪಿಸಬೇಕಾದ ಅಗತ್ಯತೆ ಹೆಚ್ಚಾಗಿದೆ ಎಂದರು.

ಬರ್ನ್ ವಿಶ್ವವಿದ್ಯಾಲಯದ ನಿರ್ದೇಶಕ ಮತ್ತು ಅಂತಾರಾಷ್ಟ್ರೀಯ ಆರ್ಥಿಕ ತಜ್ಞ ಪ್ರೊ. ಪೀಟರ್.ಎಲ್.ಎಚ್ ವಾಂಡೆನ್ ಬೋಷೆ ಮಾತನಾಡಿ, 21 ನೇ ಶತಮಾನದ ಸವಾಲುಗಳಿಗೆ ಅನುಗುಣವಾಗಿ ಅಂತಾರಾಷ್ಟ್ರೀಯ ವಾಣಿಜ್ಯ ನೀತಿಗಳನ್ನು ಪರಿಷ್ಕರಿಸುವ ಅಗತ್ಯವಿದ್ದು, ವಾಣಿಜ್ಯದ ರೀತಿನೀತಿಗಳನ್ನು ಇ ಕಾಮರ್ಸ್ ವಲಯ ಮತ್ತು ಡಿಜಿಟಲೀಕರಣಗಳು ಬದಲಾಯಿಸುತ್ತಿವೆ ಎಂದು ಅಭಿಪ್ರಾಯಪಟ್ಟರು. ಸಂವಾದದಲ್ಲಿ ಸಂಸದ ಕೆ.ಸಿ. ರಾಮಮೂರ್ತಿ ಸೇರಿದಂತೆ ಹಲವು ಗಣ್ಯರು ಪಾಲ್ಗೊಂಡಿದ್ದರು.